ಅ) ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆಯಿಲ್ಲದೆ ಇರುವುದರಿಂದ ಸಂಸ್ಥೆಯಲ್ಲಿನ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೇ;

ಇ) ಇದಕ್ಕೆ ಬದಲಾಗಿ ಲಿಖಿತ ಪರೀಕ್ಷೆಯ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ ಸಾಮಾಜಿಕ ನ್ಯಾಯ ದೊರಕಿಸಿದಂತಾಗುವದಿಲ್ಲವೆ;

ಈ) ಸರ್ಕಾರ ಈ ನಿಟ್ಟಿನಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಸಂಸ್ಥೆಯ ಅಭ್ಯರ್ಥಿಗಳಿಗೆ ಶೇಕಡವಾರು ಆದ್ಯತೆ ಕೊಡಲು ನೇಮಕಾತಿ ನಿಯಮಾವಳಿಯಲ್ಲಿ ಅವಕಾಶವಿಲ್ಲದಿರುವುದರಿಂದ, ಆದ್ಯತೆಯನ್ನು ಕೊಡಲಾಗುವುದಿಲ್ಲ.

ಆ) ಸಂಸ್ಥೆಯ ನೇಮಕಾತಿ ನಿಯಮಾವಳಿಯಲ್ಲಿ ಸಂಸ್ಥೆಯ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ಕೊಡಲು ಅವಕಾಶವಿರುವುದಿಲ್ಲ. ಆದ್ದರಿಂದ ಸಂಸ್ಥೆಯ ಅಭ್ಯರ್ಥಿಗಳಿಗೆ ಅನ್ಯಾಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಸಂಸ್ಥೆಯ ಉದ್ಯೋಗಿಗಳು ಮೇಲ್ದರ್ಜೆ ಹುದ್ದೆಗಳ ನೇರ ನೇಮಕಾತಿಯ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಸಂಸ್ಥೆಯ ಅಭ್ಯರ್ಥಿಗಳಿಗೆ ಈ ದೃಷ್ಟಿಯಿಂದ 10 ವರ್ಷಗಳ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ನೀಡಲಾಗಿದೆ.

ಇ) ಸಂಸ್ಥೆಯ ನೇಮಕಾತಿ ನಿಯಮಾವಳಿಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿದ್ದು, ಈ ನಿಯಮಾವಳಿಗಳ ಪ್ರಕಾರ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿಯಿಂದ ಭರ್ತಿ ಮಾಡಲು ಆಯಾ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯ ಅಂಕಗಳ ಅರ್ಹತೆ ಹಾಗೂ ಮೀಸಲಾತಿಗನುಗುಣವಾಗಿ ಆಯ್ಕೆಯನ್ನು ನಡೆಸಬೇಕಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಸಂಸ್ಥೆಯ ಅಭ್ಯರ್ಥಿಗಳು ಸಹ ಭಾಗವಹಿಸಬಹುದಾಗಿರುತ್ತದೆ. ದರ್ಜೆ-3 ಮತ್ತು 4 ರ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲು ಅವಕಾಶವಿರುವುದಿಲ್ಲ. ನಿಗಧಿತ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳ ಅರ್ಹತೆ ಆಧಾರದ ಮೇಲೆ ನೇಮಕಾತಿ ಮಾಡುವ ವಿಧಾನವು ಬಹಳಷ್ಟು ಉತ್ತಮವಾಗಿದ್ದು ಯಾವುದೇ ರೀತಿಯ ಲೋಪದೋಷಗಳಿಗೆ ಅವಕಾಶವನ್ನು ನೀಡುವುದಿಲ್ಲ. ಲಿಖಿತ ಪರೀಕ್ಷೆಯ ಬದಲಾಗಿ ಈ ಕ್ರಮದಿಂದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಸೂಕ್ತ ಅವಕಾಶವನ್ನು ನೀಡಿ, ಮೀಸಲಾತಿ ಪದ್ಧತಿಯನ್ನು ಪಾಲಿಸಿ ಸಾಮಾಜಿಕ ನ್ಯಾಯವನ್ನು ಅತ್ಯಂತ ಸಮರ್ಪಕವಾಗಿ ದೊರಕಿಸಿ ಕೊಡಲಾಗುತ್ತಿದೆ.

ಈ) ಮೇಲೆ ವಿವರಿಸಿರುವಂತೆ ಅಭ್ಯರ್ಥಿಯು ನಿಗಧಿತ ಪರೀಕ್ಷೆಯಲ್ಲಿ ಅಂಕಗಳ ಅರ್ಹತೆಯ ಆಧಾರದ ಮೇಲೆ ಆಯ್ಕೆಯನ್ನು ನಡೆಸುವ ವಿಧಾನವು ಅತ್ಯಂತ ಸಮರ್ಪಕವಾಗಿರುವುದರಿಂದ ಲಿಖಿತ ಪರೀಕ್ಷೆಯ ಪದ್ಧತಿಯನ್ನು ಜಾರಿಗೆ ತರುವುದು ಸಮರ್ಥನೀಯವಲ್ಲ.

ವಿಷಯ :- ಬಯಲು ಸೀಮೆ ಅಭಿವೃದ್ಧಿ ಮಂಡಳಿ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2281 (2966)

ಶ್ರೀ ಎಂ. ಚಂದ್ರಪ್ಪ (ಭರಮ ಸಾಗರ) :- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಯಲು ಸೀಮೆ ಅಭಿವೃದ್ಧಿ ಮಂಡಳಿ ಪ್ರಾರಂಭವಾಗಿ ಎಷ್ಟು ವರ್ಷಗಳಾದುವು? ಇದರ ಕೇಂದ್ರ ಕಛೇರಿ ಇರುವುದೆಲ್ಲಿ?

ಆ) ಈ ಮಂಡಳಿಯ ಅಭಿವೃದ್ಧಿಗಾಗಿ 1995-96 ನೇ ಸಾಲಿಗೆ ಎಷ್ಟು ಕೋಟಿ ಹಣವನ್ನು ಕಾದಿರಿಸಲಾಗಿದೆ?

ಇ) ಈ ಮಂಡಳಿಯ ಕಾರ್ಯಕ್ರಮಗಳೇನು?

ಈ) ಈ ಮಂಡಳಿಗೆ ಎಷ್ಟು ತಾಲ್ಲೂಕುಗಳು ಸೇರಿವೆ? ಈಗ ಯಾವ ಯಾವ ತಾಲ್ಲೂಕುಗಳಲ್ಲಿ ಏನೇನು ಕೆಲಸಗಳು ನಡೆಯುತ್ತಿವೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :-

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮವು ದಿನಾಂಕ : 26-1-95 ರಿಂದ ಜಾರಿಗೆ ಬರುವುದೆಂದು ಸರ್ಕಾರವು ದಿನಾಂಕ : 24-1-95 ರ ಕರ್ನಾಟಕ ರಾಜ್ಯ ಪತ್ರದ ಮುಖೇನ ಈಗಾಗಲೇ ಪ್ರಕಟಣೆ ನೀಡಿದೆ.

ಚಿತ್ರದುರ್ಗವು ಈ ಮಂಡಳಿಯ ಕೇಂದ್ರ ಸ್ಥಾನವಾಗಿದೆ.

ಆ) ಈ ಮಂಡಳಿಗೆ 1995-96 ನೇ ಸಾಲಿಗಾಗಿ ಯೋಜನಾ ಲೆಕ್ಕ ಶಿರ್ಷಿಕೆ 2402-00-796-0-02 ರಲ್ಲಿ 43-00 ಲಕ್ಷ ರೂಗಳನ್ನು ಹಾಗೂ 2402-00-800-2-01 ಲೆಕ್ಕ ಶಿರ್ಷಿಕೆಯಡಿ 381-00 ಲಕ್ಷ ರೂಗಳನ್ನು ಅಂದರೆ ಒಟ್ಟು 4.24 ಕೋಟಿ ರೂಗಳನ್ನು ಕಾದಿರಿಸಲಾಗಿದೆ, ಅಲ್ಲದೆ ವಿಶೇಷ ಘಟಕ ಯೋಜನೆಯಲ್ಲೂ ಸಹ ಈ ಮಂಡಳಿಗೆ 1995-96 ನೇ ಸಾಲಿಗಾಗಿ 2402-00-800-2-02 ಲೆಕ್ಕ ಶಿರ್ಷಿಕೆಯಡಿಯಲ್ಲಿ 1.73 ಕೋಟಿ ರೂಗಳನ್ನು ಮೀಸಲಿಡಲಾಗಿದೆ.

ಈ ಮಂಡಳಿಯ ಉದ್ದೇಶಗಳಾವುವೆಂದರೆ.

1. ಬಯಲು ಸೀಮೆ ಜಲಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಪ್ರೋತ್ಸಾಹ ನೀಡುವುದು.
2. ಬಯಲು ಸೀಮೆಯ ಮಳೆ ಆಧಾರಿತ ಕೃಷಿ ಪದ್ಧತಿಗಳ ಭೂಸಾರ ಮತ್ತು ಜಲಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು.
3. ಬಯಲು ಸೀಮೆಯಲ್ಲಿ ಅರಣ್ಯಾಭಿವೃದ್ಧಿಗೆ ಉತ್ತೇಜನ ನೀಡುವುದು.
4. ಬಯಲು ಸೀಮೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು.
5. ಬಯಲು ಸೀಮೆಯಲ್ಲಿ ಕೃಷಿ ಮತ್ತು ತತ್ಸಂಬಂಧಿ ವಲಯಗಳಲ್ಲಿನ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ನೆರವು ನೀಡುವುದು.
6. ಬಯಲು ಸೀಮೆಯ ಪ್ರದೇಶದಲ್ಲಿ ಪಶುಸಂಗೋಪನೆಗೆ ಉತ್ತೇಜನ ನೀಡುವುದು.

ಈ) ಈ ಮಂಡಳಿಯ ವ್ಯಾಪ್ತಿಗೆ 8 ಜಿಲ್ಲೆಗಳ 57 ತಾಲ್ಲೂಕುಗಳು ಸೇರಿವೆ, ಸರ್ಕಾರವು ಇತ್ತೀಚೆಗೆ ಈ ಮಂಡಳಿಗೆ ಪೂರ್ಣಾವಾಧಿಯ ಕಾರ್ಯದರ್ಶಿಯವರನ್ನು ಈಗಾಗಲೇ ನೇಮಿಸಿದ್ದು ಈ ಮಂಡಳಿಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಕೂಡಲೇ ರೂಪಿಸುವಂತೆ ಅವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ವಿಷಯ :- ಹಣ್ಣಿನ ಉತ್ಪಾದನೆಗೆ ಸಂಶೋಧನಾ ಕೇಂದ್ರಗಳಿಗೆ ಧನ ಸಹಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2283 (2947)

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) :- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳು ಯಾವ ಯಾವ ಹಣ್ಣಿನ ಉತ್ಪಾದನೆಗೆ ಹೆಸರುವಾಸಿಯಾಗಿವೆ? ಈ ಹಣ್ಣುಗಳ ಸಂಶೋಧನಾ ಕೇಂದ್ರಗಳೇನಾದರೂ ಇವೆಯೇ? ಹಾಗಿದ್ದಲ್ಲಿ ಅವುಗಳಿಗಿರುವ ಸ್ಥಳಗಳಾವುವು?

ಆ) ಕೇಂದ್ರ ಸರ್ಕಾರವು ದ್ರಾಕ್ಷಿಹಣ್ಣಿನ ಸಂಶೋಧನಾ ಕೇಂದ್ರ ಪ್ರಾರಂಭಿಸಲು ಅಗತ್ಯ ಧನ ಸಹಾಯ ನೀಡಲಾಗುತ್ತಿದೆಯೇ. ಹಾಗಿದ್ದಲ್ಲಿ ಕಾರಣಗಳೇನು?

ಇ) ರಾಜ್ಯದಲ್ಲಿಯೇ ದ್ರಾಕ್ಷಿ ಹಣ್ಣಿನ ಬೆಳೆಯನ್ನು ಬಿಜಾಪುರ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಈ ಬೆಳೆಗಾರರಿಗೆ ಸರ್ಕಾರಕ್ಕೆ ಯಾವ ರೀತಿ ಸೌಲಭ್ಯವನ್ನು ಕಲ್ಪಿಸಿಕೊಡಲು ಉದ್ದೇಶಿಸಿದೆ.

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :-

ಅ) ಇದರೊಂದಿಗೆ ಒದಗಿಸಿರುವ ಅನುಬಂಧದಲ್ಲಿ ವಿವರಣೆ ಕೊಟ್ಟಿದೆ.

ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಹೆಸರುಘಟ್ಟ, ಬೆಂಗಳೂರು, ಕೊಡಗು ಜಿಲ್ಲೆಯಲ್ಲಿ ಈ ಸಂಸ್ಥೆಯ ಪ್ರಾದೇಶಿಕ ಸಂಶೋಧನಾ ಕ್ಷೇತ್ರಗಳು ಚಿಟ್ಟಹಳ್ಳಿ, ಗೋಣಿ ಕೊಪ್ಪಲ್‌ನಲ್ಲಿವೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ ಇವರಲ್ಲಿ ಸಹ ತಮ್ಮದೇ ಆದ ಸಂಶೋಧನಾ ಕೇಂದ್ರಗಳಿವೆ.

ಆ) ಇಲ್ಲ, ಉದ್ಭವಿಸುವುದಿಲ್ಲ.

ಇ) ಬಂದಿದೆ.

ಸೌಕರ್ಯಗಳು ಈ ರೀತಿ ಇದೆ.

1) ದ್ರಾಕ್ಷಿ ಹಣ್ಣನ್ನು, ಒಣ ದ್ರಾಕ್ಷಿಯನ್ನು ಹಾಗೂ ಇತರೆ ತೋಟಗಾರಿಕೆ ಉತ್ಪನ್ನಗಳನ್ನು ಕೆಡದಂತೆ ಇಡಲು ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ 2 ಶೀತಲ ಗೃಹಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ.